ಸಿಂಡಿಕೇಟ್ ಮತ್ತು ಸೆನೆಟ್‌ಗಳಿಗೆ ವಿದ್ಯಾರ್ಥಿ ಸಮುದಾಯದಿಂದ ಆಯ್ಕೆ ಮಾಡುವುದು.

೮೦೧೨ ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಮತ್ತು ಸೆನೆಟ್‌ಗಳಿಗೆ ವಿದ್ಯಾರ್ಥಿ ಸಮುದಾಯದಿಂದ ಸದಸ್ಯರನ್ನು ನೇಮಕ ಮಾಡುವುದಕ್ಕೋಸ್ಕರ ವಿಶ್ವವಿದ್ಯಾನಿಲಯದ ಅಧಿನಿಯಮಕ್ಕೆ ತಿದ್ದುಪಡಿಯನ್ನೇನಾದರೂ ತರಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ

ಇ) ಎಷ್ಟು ಸಮಯದಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗುವುದು.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಸೆನೆಟ್‌ಗಳಿಗೆ ವಿದ್ಯಾರ್ಥಿಗಳನ್ನು ನೇಮಕ ಮಾಡಲು ಈಗಾಗಲೇ ಕಾಯ್ದೆಗೆ ತಿದ್ದುಪಡಿ ಆಗಿದೆ. ಆದರೆ ಸಿಂಡಿಕೇಟ್‌ಗಳಿಗೆ ನೇಮಕ ಮಾಡಲು ಸರ್ಕಾರಕ್ಕೆ ಉದ್ದೇಶವಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶಿವಮೊಗ್ಗ ತಾಲ್ಲೂಕಿನ ಕುಂಸಿ ಏತ ನೀರಾವರಿ ಯೋಜನೆ;

೮೦೫ ಶ್ರೀ. ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ತಾಲ್ಲೂಕು ಕುಂಸಿ ಏತ ನೀರಾವರಿ ಯೋಜನೆಯನ್ನು ಹಿಂದಿನ ಆಯವ್ಯಯ ಪಟ್ಟಿಯಲ್ಲಿ ಸೇರಿಸಲಾಗಿತ್ತೆ ?

ಆ) ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೪-೮೫ರ ಆಯವ್ಯಯ ಪಟ್ಟಿಯಲ್ಲಿ ಮಾತ್ರ ಈ ಕಾಮಗಾರಿಯನ್ನು ಸೇರಿಸಿತ್ತು.

ಆ) ಈ ಕಾಮಗಾರಿಯನ್ನು ಬಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತವು ಕಾರ್ಯಗತಗೊಳಿಸಬೇಕಾಗಿದ್ದು ಅದರ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಕಾಲೇಜುಗಳು

೭೯೬. ಶ್ರೀ. ಪಂಪಾಪತಿಯವರು (ದಾವಣಗೆರೆ)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಪದವಿಪೂರ್ವ ಕಾಲೇಜುಗಳೆಷ್ಟು, ಇವುಗಳಲ್ಲಿ ಖಾಸಗಿ ಕಾಲೇಜುಗಳೆಷ್ಟು ಹಾಗೂ ಸರ್ಕಾರಿ ಕಾಲೇಜುಗಳೆಷ್ಟು ?

ಆ) ರಾಜ್ಯದಲ್ಲಿರುವ ಒಟ್ಟು ಎಂಜಿನಿಯರಿಂಗ್ ಕಾಲೇಜುಗಳೆಷ್ಟು, ಅವುಗಳಲ್ಲಿ ಖಾಸಗಿಯೆಷ್ಟು ಹಾಗೂ ಸರ್ಕಾರಿಯೆಷ್ಟು ?

ಇ) ರಾಜ್ಯದಲ್ಲಿರುವ ಒಟ್ಟು ಮೆಡಿಕಲ್ ಕಾಲೇಜುಗಳೆಷ್ಟು ಅವುಗಳಲ್ಲಿ ಖಾಸಗಿ ಮತ್ತು ಸರ್ಕಾರಿ ಕಾಲೇಜುಗಳೆಷ್ಟು ?

ಈ) ರಾಜ್ಯದಲ್ಲಿರುವ ಒಟ್ಟು ಪದವಿ ಕಾಲೇಜುಗಳೆಷ್ಟು, ಖಾಸಗಿ ಪದವಿ ಕಾಲೇಜುಗಳೆಷ್ಟು ಹಾಗೂ ಸರ್ಕಾರಿ ಕಾಲೇಜುಗಳೆಷ್ಟು ?